<u>ಸಿ.ಸಿ .ನಂ. 283/2023</u> <u>ಪಿಡಬ್ಲೂಃ 1</u>

<u>ದಿನಾಂಕಃ 29-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ</u>**

3. ನಾನು ಕಳೆದ ಮೂರು ತಿಂಗಳಿಂದ ಫಿರ್ಯಾದು ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಬ್ಯಾಂಕಿಗೆ ಮ್ಯಾನೇಜರ್ ಆಗಿ ಸೇರಿದ ನಂತರ ಹಣ ಮರು ಪಾವತಿ ಕುರಿತು ಯಾವುದೇ ನೋಟಿಸನ್ನು ಕಳಿಸಿರುವುದಿಲ್ಲ. ಆರೋಪಿ ಚಿನ್ನ, ಬೆಳ್ಳಿ ಆಭರಣ ತಯಾರಿಕೆ ಹಾಗೂ ಮಾರಾಟ ಮಾಡುತ್ತಾರೆಂದು ತೋರಿಸಲು ನಮ್ಮ ಬಳಿ ದಾಖಲಾತಿ ಇದೆಯೋ ಇಲ್ಲವೋ ದಾಖಲಾತಿ ನೋಡಬೇಕು . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ನಮ್ಮ ಬ್ಯಾಂಕಿನಲ್ಲಿರುವ ದಾಖಲಾತಿ ನೋಡಿದ್ದೇನೆ . ಮೊದಲನೇ ಮೊರ್ಟಗೇಜ್ ಲೋನ್ ನ್ನು ಯಾವ ವಸ್ತು ಅಡವು ಇಟ್ಟು ಸಾಲ ನೀಡಲಾಗಿದೆ ದಾಖಲಾತಿ ನೋಡಿ ಹೇಳಬೇಕು. 2016 ರಲ್ಲಿ ಮೊದಲನೇ ಸಾಲವನ್ನು ನೀಡಿದ್ದೇವೆ ಎಂದು ಹೇಳುವ ಸಂದರ್ಭದಲ್ಲಿ 9% ರಿಂದ 10% ಬಡ್ಡಿ ಆಕರಣೆ ಮಾಡುತ್ತಿದ್ದೆವು . ಅದು ಲೋನ್ ಸೆಂಕ್ಷನ್ ಕಾಪಿಯಲ್ಲಿ ಇರುತ್ತದೆ . ಲೋನ್ ಸೆಂಕ್ಷನ್ ಕಾಪಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದೇವೆ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.